

ಕೊಂಕಣಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತವಾಗಿಸಿದ **ಮಹಾಬಳೇಶ್ವರ ಸೈಲ್** ಅವರ ಸಾಹಿತ್ಯ ಒರತೆಗೆ ಅವರ ಸಾಂದ್ರವಾದ ಜೀವನಾನುಭವವೇ ದ್ರವ್ಯ. ಚಿಕ್ಕ ವಯಸ್ಸಿನಲ್ಲಿ ಏಕಾಂಗಿಯಾಗಿ ಕೃಷಿ ಮಾಡುತ್ತಿದ್ದ ಅವರು ನಂತರ ಭಾರತೀಯ ಸೇನೆಯಲ್ಲಿ ದುಡಿದರು. ಅಲ್ಲಿಂದ ಮರಳಿ ಬಂದು ದಟ್ಟ ಅಡವಿಯಲ್ಲಿ ವಿದ್ಯುತ್ ಕಂಬಗಳ ಪರಿಶೀಲನೆಯ ಕೆಲಸ ಮಾಡಿದರು. ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿ, ಅಂಚೆ ಇಲಾಖೆಯಲ್ಲಿ ಪೋಸ್ಟ್ ಮಾಸ್ಟರ್ ಆಗಿ ದುಡಿದರು.

ಈ ನಿರಂತರ ದುಡಿಮೆಯ ಹಾದಿಯು ಅವರ ಕೃತಿಗಳಲ್ಲಿ ವ್ಯಾಪಕವಾಗಿ ಗೋಚರಿಸಿದೆ. ಮರಾಠಿ ಮತ್ತು ಕೊಂಕಣಿ ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿದ ಅವರು, ಅತಿ ಹೆಚ್ಚು ಕೃತಿಗಳನ್ನು ಕೊಂಕಣಿಯಲ್ಲಿ ಬರೆದಿದ್ದಾರೆ.